# ಶಾರದಾ ಸೇವಾಶ್ರಮ

'ತವರುಮನೆ', ಬನಶಂಕರಿ 3ನೇ ಹಂತ, ಬೆಂಗಳೂರು-560 085 ದೂರವಾಣಿ : 26723977

## ಶ್ರೀರಾಮಕೃಷ್ಣ ಹೋಮ

**ಫೆಬ್ರವರಿ 28, 2010, ಭಾನುವಾರ ಬೆಳಗ್ಗೆ 8.00ರಿಂದ ಮಧ್ಯಾಹ್ನ 1.30**

**ಸ್ಥಳ : ವಾಸವಿ ಸಮುದಾಯ ಭವನ**

ವಾಣಿ ವಿಲಾಸ್ ರಸ್ತೆ, ಬೆಂಗಳೂರು - 560 004

ದಿವ್ಯಸಾನ್ನಿಧ್ಯ

**ಪರಮಪೂಜ್ಯ ಶ್ರೀಮತ್ ಸ್ವಾಮಿ ಹರ್ಷಾನಂದಜೀ ಮಹಾರಾಜ್**

ಅಧ್ಯಕ್ಷರು, ರಾಮಕೃಷ್ಣ ಮಠ, ಬಸವನಗುಡಿ, ಬೆಂಗಳೂರು

**ಪರಮಪೂಜ್ಯ ಶ್ರೀಮತ್ ಸ್ವಾಮಿ ವೀತಭಯಾನಂದಜೀ ಮಹಾರಾಜ್**

ಅಧ್ಯಕ್ಷರು, ರಾಮಕೃಷ್ಣ ಮಠ, ಹಲಸೂರು, ಬೆಂಗಳೂರು

**ಪರಮಪೂಜ್ಯ ಶ್ರೀಮತ್ ಸ್ವಾಮಿ ರಾಘವೇಶಾನಂದಜೀ ಮಹಾರಾಜ್**

ಅಧ್ಯಕ್ಷರು, ರಾಮಕೃಷ್ಣ ಮಿಷನ್ ಆಶ್ರಮ, ಬೆಳಗಾವಿ

**ಪರಮಪೂಜ್ಯ ಶ್ರೀಮತ್ ಸ್ವಾಮಿ ತದ್ಯುಕ್ತಾನಂದಜೀ ಮಹಾರಾಜ್**

ರಾಮಕೃಷ್ಣ ಮಿಷನ್ ಆಶ್ರಮ, ಬೆಳಗಾವಿ

**ಪರಮಪೂಜ್ಯ ಮಾತಾಜೀ ವಿವೇಕಮಯೀ**

ಅಧ್ಯಕ್ಷರು, ಭವತಾರಿಣಿ ಆಶ್ರಮ, ವಿಜಯನಗರ, ಬೆಂಗಳೂರು

**ನೀವೂ ಬನ್ನಿ. ನಿಮ್ಮ ಆತ್ಮೀಯರನ್ನೂ ಕರೆತನ್ನಿ.**

### ಕಾರ್ಯಕ್ರಮ

| | |
|---|---|
| 08.00 ರಿಂದ 09.00 | ಪೂಜೆ, ಶ್ರೀವಿಷ್ಣುಸಹಸ್ರನಾಮ ಪಠಣ, ಶ್ರೀರಾಮಕೃಷ್ಣ ಅಷ್ಟೋತ್ತರ ಅರ್ಚನೆ |
| 09.00 ರಿಂದ 10.00 | ಶ್ರೀರಾಮಕೃಷ್ಣ ಹೋಮ |
| 10.00 ರಿಂದ 10.50 | ಭಗವನ್ನಾಮ ಸಂಕೀರ್ತನೆ |
| 10.55 | 'ಒಬ್ಬೊಬ್ಬರಿಗೂ ಭಗವದ್ಗೀತೆ' (18 ಅಧ್ಯಾಯಗಳು) ಪುಸ್ತಕ ಬಿಡುಗಡೆ |
| 11.00 ರಿಂದ 11.30 | ಪ್ರವಚನಗಳು |
| 01.00 ರಿಂದ 01.15 | ಮಂಗಳಾರತಿ ನಂತರ ಅನ್ನಪ್ರಸಾದ |

**ವಿಶೇಷ ಸೂಚನೆ :**

1. ರಾಮಕೃಷ್ಣ-ವಿವೇಕಾನಂದ ಹಾಗೂ ವೇದಾಂತ ಸಾಹಿತ್ಯದ ಪುಸ್ತಕಗಳು, ಭಜನೆ ಹಾಗೂ ಪ್ರವಚನಗಳ ಧ್ವನಿಸುರುಳಿಗಳು ಮಾರಾಟಕ್ಕಿರುತ್ತವೆ.
2. ಕಾರ್ಯಕ್ರಮದ ದಿನ ಪುಸ್ತಕಗಳ ಮೇಲೆ ವಿಶೇಷ ರಿಯಾಯಿತಿಯಿದೆ.
3. ಧನ-ಧಾನ್ಯ-ವಸ್ತು-ಸಹಾಯ-ಸಹಕಾರಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು

# ಕನ್ನಡದ ಕಣ್ಮಣಿಗಳು : ಹರಿದಾಸರು – ೨

(ಹಿಂದಿನ ಸಂಚಿಕೆಯಿಂದ)

### ಭಗವಂತನಿಗೆ ಅನಂತ ರೂಪಗಳು

ಭಗವಂತನ ಮಹಿಮೆಯನ್ನು ಅದೆಷ್ಟು ವಿಧದಲ್ಲಿ ಪ್ರಶಂಸಿಸುತ್ತಾರೆ, ಹರಿದಾಸರು! ಭಗವಂತನ ಅನುಪಮ ರೂಪ ಅವರ ಮನಃಪಟಲದಲ್ಲಿ ನಿಲ್ಲುತ್ತದೆ. ಅದರ ಅಗಣಿತ ಸೊಗಸನ್ನು ಹಾಡಿಪಾಡುವುದೇ ಅವರ ಸಾಧನೆಯ ಪ್ರಮುಖ ಅಂಗವಾಗುತ್ತದೆ.

ಒಂದು ರೂಪವ ನೋಡೆ ಅನಂತಪೂರ್ಣ ಇನ್ನು
ಒಂದು ಅವಯವವೆ ಪೂರ್ಣವಯ್ಯ
ಒಂದು ರೂಪದೊಳಗೆ ಅನಂತರೂಪಗಳು
ಒಂದು ರೂಪದಿಂದ ಭೇದಾಭೇದನಾಗಿಪ್ಪ

.................................................................

ಒಂದು ರೂಪದಲ್ಲಿನ್ನು ನಿಂದು
ನಾನಾ ವೈಚಿತ್ರ್ಯನಾಗಿ ತೋರುವ
ದೈವಸುಂದರ ಮೂರುತಿ ಗೋಪಾಲವಿಠಲ
ಒಂದೊಂದನಂತ ರೂಪ ಅನಂತ ಒಂದೇ ರೂಪ

ಆ ರೂಪಗಳಾದರೋ ಅಸದಳ ತೇಜಸ್ಸಿನಿಂದ ಬೆಳಗುತ್ತಿರುವಂಥವು.

ಒಂದು ರವಿಯ ತೇಜ, ಒಂದು ದ್ವಿರವಿ ತೇಜ
ಒಂದಕ್ಕೊಂದು ಅಧಿಕ ಹತ್ತು ರವಿಯ ತೇಜ

ಭಗವಂತನ ರೂಪವು ಅಣುವಿಗೂ ಅಣು, ಮಹತ್ತಿಗೂ ಮಹತ್ತು. ಅವನ ರೂಪ ಅಚಿಂತ್ಯ, ಅದ್ಭುತ.

ಅಣುವಾಗಬಲ್ಲ ಮಹತ್ತಾಗಬಲ್ಲ
ಅಣುಮಹತ್ತೆರಡೊಂದಾಗಬಲ್ಲ
ರೂಪನಾಗಬಲ್ಲ ಅರೂಪನಾಗಬಲ್ಲ
ರೂಪ ಅರೂಪ ಎರಡೊಂದಾಗಬಲ್ಲ

.................................................................

ವ್ಯಕ್ತನಾಗಬಲ್ಲ, ಅವ್ಯಕ್ತನಾಗಬಲ್ಲ
ವ್ಯಕ್ತ ಅವ್ಯಕ್ತ ಎರಡೊಂದಾಗಬಲ್ಲ
ಘಟಿತಾಘಟಿತಚಿಂತ್ಯಾದ್ಭುತ
ಸ್ವಗತಸ್ವರೂಪ ನಮ್ಮ ಪುರಂದರ ವಿಠಲ

ಅಂತಹ ಹರಿಯು ಅಗಣಿತನು.

ಅಣುರೇಣುತೃಣದಲ್ಲಿ ಪರಿಪೂರ್ಣನಾಗಿರುವ
ಗುಣವಂತನೆ ನಿನ್ನ ಮಹಿಮೆ ಗಣನೆ ಮಾಡುವರ್ಯಾರು

### ಮನಃಪೂರ್ವಕ ಪ್ರಾರ್ಥನೆ

ಅಂತಹ ಹರಿಗೆ ಮನಃಪೂರ್ವಕವಾಗಿ ಪ್ರಾರ್ಥನೆಯನ್ನು ಸಲ್ಲಿಸಬೇಕು. ಹರಿಯ ಪ್ರಾರ್ಥನೆಯನ್ನು ಮಾಡುವಾಗ ಹರಿದಾಸರು ದೈನ್ಯಭಾವದಲ್ಲಿ ಮುಳುಗಿಹೋಗುತ್ತಾರೆ. ತಮ್ಮ ಅಲ್ಪತೆಯನ್ನು, ದುಃಖದುಮ್ಮಾನಗಳನ್ನು ಒಡೆಯನಾದ ಭಗವಂತನಲ್ಲಿ ತೋಡಿಕೊಂಡು, ಆತನ ಕರುಣಾಕಟಾಕ್ಷಕ್ಕಾಗಿ ಬೇಡುತ್ತಾರೆ.

ದಯಮಾಡಿ ಸಲಹಯ್ಯ ಭಯನಿವಾರಣನೆ
ಹಯವದನ ನಿನ್ನ ಚರಣ ನಂಬಿದೆ ಜೀಯ
ಕ್ಷಣಕ್ಷಣಕೆ ನಾ ಮಾಡಿದಂಥ ಪಾಪಗಳನ್ನು
ಎಣಿಸಲಳವಲ್ಲ ಅಷ್ಟಿಷ್ಟು ಎಂದು
ಫಣಿಶಾಯಿ ನೀನೆನ್ನ ಅವಗುಣಗಳೆಣಿಸದೆ
ನೆನಹಿನಾತುರ ಕೊಟ್ಟು ದಾಸನೆಂದೆನಿಸಯ್ಯ

(ಶ್ರೀಪಾದರಾಜರು)

ಇನ್ನೂ ದಯಬಾರದೇ ದಾಸನ ಮೇಲೆ
ಇನ್ನೂ ದಯಬಾರದೆ
ಪನ್ನಗಶಯನ ಪಾಲ್ಗಡಲೊಡಯನೆ ಕೃಷ್ಣ
ನಾನಾದೇಶಗಳಲ್ಲಿ ನಾನಾಕಾಲಗಳಲ್ಲಿ
ನಾನಾಯೋನಿಗಳಲ್ಲಿ ನಲಿದು ಪುಟ್ಟಿ
ನಾನು ನನ್ನದು ಎಂಬ ನರಕದೊಳು ಬಿದ್ದು
ನೀನೆ ಗತಿಯೆಂದು ನಂಬಿದ ದಾಸನ ಮೇಲೆ

.................................................................

ತಪ್ಪುಗಳೆಲ್ಲ ನೀನೊಪ್ಪಿಕೊಳ್ಳೋ
ನಮ್ಮಪ್ಪ ಕಾಯಬೇಕು ತಿಮ್ಮಪ್ಪ ನೀನೆ

.................................................................

ಎಷ್ಟು ಹೇಳಲಿ ಅವಗುಣಗಳೆಲ್ಲ
ಅವು ಅಷ್ಟು ಇಷ್ಟು ಎಂದು ಎಣಿಕೆಯಿಲ್ಲ
ದೃಷ್ಟಿಯಿಂದಲಿ ನೋಡೋ ದೀನವತ್ಸಲ
ಸರ್ವಸೃಷ್ಟಿಗೊಡೆಯ ಪುರಂದರ ವಿಠಲ

(ಪುರಂದರದಾಸರು)

ನೀನುಪೇಕ್ಷೆಯ ಮಾಡೆ ಬೇರೆ ಗತಿಯಾರೆನಗೆ
ನಿಗಮಗೋಚರ ಮುಕುಂದ

.................................................................

ಈಷಣತ್ರಯದ ಬಯಲಾಸೆಯಲಿ ಭ್ರಮೆಗೊಂಡು
ಬೇಸರದಿ ಮನದಿ ನೊಂದು
ಹೇಸಿಗೆಯ ಸಂಸಾರ ಸಾಗರದಿ ಮುಳುಗಿ
ಬಹುಘಾಸಿ ಪಡಲಾರೆನಿಂದು
ಮೋಸವಿಲ್ಲದೆ ಯಮನ ಪಾಶವನು ಹರಿವುದಕೆ
ಕೌಶಲವ ತೋರಿ ಇಂದು
ದಾಸನೆಂದೆನಿಸಿ ಡಂಗುರವ ಹೊಯಿಸಿದೆಯೋ
ನೆಲೆಯಾದಿ ಕೇಶವನೆ ಹರಿಯೆ ದೊರೆಯೇ (ಕನಕದಾಸರು)

ಜನಿಸಲಾರೆನು ಜಗದೊಳಗೆ ಹರಿಯೆ
ಕನಸಿನೊಳು ನೆನೆಯೆ ಕಂಪನವಾಗುತಿದೆ ಮನಕೆ

............................................................................

ಸುಖದ ದೈವವೆಂದು ಸತತದಿ ಸುಖಿಸಿದೆ
ಮುಖವ ತಿರುಹುವರೇನೋ ಮುರವಿರೋಧಿಯೇ
(ವಿಜಯದಾಸರು)

ಹರಿದಾಸರ ಮುಖ್ಯವಾದ ಬೇಡಿಕೆಯೆಂದರೆ ಭವಬಂಧನದಿಂದ ಕಾಪಾಡಬೇಕೆಂಬುದು. ಅದಕ್ಕಾಗಿ ಈ ಸಂಸಾರದ ಕರಾಳ ಚಿತ್ರವನ್ನೂ, ತಮ್ಮ ಅಸಹಾಯಕತೆಯನ್ನೂ ಮಾರ್ಮಿಕವಾಗಿ ಅವರು ಬಣ್ಣಿಸುತ್ತಾರೆ. ಅದಲ್ಲದೆ, ತಮ್ಮನ್ನು ಅಪರಾಧಿಯ, ಪಾಪಿಯ ಸ್ಥಾನದಲ್ಲಿ ನಿಲ್ಲಿಸಿಕೊಂಡಿರುವುದೂ ಉಂಟು.

ಬಿನ್ನಹಕೆ ಬಾಯಿಲ್ಲವಯ್ಯ
ಅನಂತ ಅಪರಾಧ ಎನ್ನಲ್ಲಿ ಇರಲಾಗಿ
(ಪುರಂದರದಾಸರು)

ಅಪರಾಧವೆನ್ನದೈಯ ಹೇ ಜೀಯ
ಅಪರಾಧವೆನ್ನದೈಯ ಅಪರಿಮಿತನೇ ಸರಿ
ಕೃಪೆ ಮಾಡುವುದಿಲ್ಲವೆ ಕೃಪಣವತ್ಸಲ ಕೃಷ್ಣ
(ವ್ಯಾಸರಾಯರು)

ಇಷ್ಟಾದರೂ, ಕೃಪಾಪೂರಿತನಾಗಿ ಕಾಯಬೇಕು ಎಂದು ಆರ್ತರಾಗಿ ಹರಿದಾಸರು ಭಗವಂತನಲ್ಲಿ ಬೇಡಿಕೊಳ್ಳುತ್ತಾರೆ:

ಇಂದು ಎನಗೆ ಗೋವಿಂದ ನಿನ್ನಯ
ಪಾದಾರವಿಂದವ ತೋರೋ ಮುಕುಂದನೆ
(ರಾಘವೇಂದ್ರ ಸ್ವಾಮಿಗಳು)

ಕಾಪಾಡುವುದೆಂದರೆ, ರಾಜ್ಯ ಸುಖ ಭೋಗಗಳನ್ನು ಗಳಿಸುವುದಲ್ಲ, ಭಗವಂತನ ಸ್ಮರಣೆಯ ಪರಮಭಾಗ್ಯವನ್ನು ಪಡೆಯುವುದು; ಅದನ್ನು ಸಾಧಿಸಲು ಭಕ್ತರ ಸಂಗವನ್ನು ಹೊಂದುವುದು.

ನಾ ನಿನಗೇನು ಬೇಡುವುದಿಲ್ಲ
ಎನ್ನ ಹೃದಯ ಕಮಲದೊಳು ನಿಂದಿರು ಕೃಷ್ಣ
ಶಿರ ನಿನ್ನ ಚರಣಕ್ಕೆ ಎರಗಲಿ,
ಎನ್ನ ಚಕ್ಷುಗಳು ನಿನ್ನ ನೋಡಲಿ
ಕರ್ಣ ಗೀತಂಗಳ ಕೇಳಲಿ, ನಿನ್ನ ನಿರ್ಮಾಲ್ಯವ
ನಾಸವಾಘ್ರಾಣಿಸಲಿ ಹರಿಯೆ (ವ್ಯಾಸರಾಜರು)

ಎನ್ನ ಮನ ಕಂಡಕಂಡ ಕಡೆಗೆ ಎರಗುತಿದೆ,
ನಿನ್ನಲ್ಲಿ ನಿಲ್ಲಿಸಿ ಕಾಯೋ
ಇದನಾದರೂ ಕೊಡದಿದ್ದರೆ
ನಿನ್ನ ಪದಕಮಲವ ಭಜಿಸುವುದೆಂತೋ
(ಶ್ರೀಪಾದರಾಜರು)

ಇದನೆ ಪಾಲಿಸು ಜನ್ಮಜನ್ಮಗಳಲಿ ಮಧುಸೂದನನೆ
ನಿನ್ನ ಸ್ಮರಣೆ ದಾಸರ ಸಂಗ (ಜಗನ್ನಾಥದಾಸರು)

**ಬಿಂಬೋಪಾಸನೆ**

ಪ್ರಾರ್ಥನೆಯಲ್ಲಿ ಪರಿಪಕ್ವವಾದ ದಾಸರ ಮನಸ್ಸು ಭಗವನ್ಮೂರ್ತಿಯ ಮನನ ಮತ್ತು ಧ್ಯಾನಗಳಲ್ಲಿ ತಲ್ಲೀನವಾಗುತ್ತದೆ. ಇವರ ಧ್ಯಾನದ ವಿಧಾನವನ್ನು ಚೆನ್ನಾಗಿ ತಿಳಿಯಲು ಮಾಧ್ವತತ್ತ್ವದ ಹಿನ್ನೆಲೆ ಅಗತ್ಯ. ಭಗವತ್‌ಸಾಕ್ಷಾತ್ಕಾರವೇ ಜೀವನದ ಮುಖ್ಯ ಧ್ಯೇಯ. ಆದರೂ ಬಾಹ್ಯದರ್ಶನವೇ ಸಾಧನೆಯ ಅಂತಿಮ ಘಟ್ಟವಲ್ಲ. ಬಾಹ್ಯರೂಪದರ್ಶನದಲ್ಲಿ ಭಗವಂತನಲ್ಲಿ ನಿಷ್ಠೆ ಏಕಪ್ರಕಾರವಾಗಿರುವುದಿಲ್ಲ. ಆದ್ದರಿಂದಲೇ ಹೃದಯಗಹ್ವರದಲ್ಲಿ ತನ್ನ ಸ್ವರೂಪದ 'ಬಿಂಬ' ರೂಪನಾದ ಭಗವತ್‌ತತ್ತ್ವದ ಪರಮಾನುಭವವನ್ನು ಮಾಡಿಕೊಂಡವರೇ ನಿಜವಾದ ಯೋಗಿಗಳು. ಇದಕ್ಕೇ ಅಪರೋಕ್ಷಜ್ಞಾನ ಎಂದು ಹೆಸರು. ಇದು ಮಾಧ್ವತತ್ತ್ವದ ನಿಲುವು.

ಈಗ ನಾವು 'ಬಿಂಬ-ಪ್ರತಿಬಿಂಬ' ತತ್ತ್ವದ ಬಗ್ಗೆ ತಿಳಿದುಕೊಳ್ಳಬೇಕು. ಶ್ರೀಮಧ್ವರು ಇಡೀ ಅಸ್ತಿತ್ವವನ್ನು 'ಸ್ವತಂತ್ರ' ಮತ್ತು 'ಪರತಂತ್ರ' ಎಂಬುದಾಗಿ ವಿಭಜಿಸುತ್ತಾರೆ. ಭಗವಾನ್ ನಾರಾಯಣನೊಬ್ಬನೇ ಸ್ವತಂತ್ರ. ಉಳಿದ ದೇವತೆಗಳು, ಮನುಷ್ಯರಿಂದ ಆರಂಭವಾಗಿ ಜಗತ್ತಿನ ಎಲ್ಲ ಚೇತನ ಅಚೇತನ ಪದಾರ್ಥಗಳು ಕೂಡ ಅಸ್ವತಂತ್ರವಾದುವು, ಅಂದರೆ ಭಗವಂತನ ಇಚ್ಛಾಶಕ್ತಿಗೆ ಅಡಿಯಾಳಾಗಿ ಇರುವಂಥವು. ಜೀವಿಗಳನ್ನು ಬಂಧನವು ಕವಿದಿರುತ್ತವೆ. ಅದು ಜೀವಿಗಳ ನೈಜ ಸ್ವರೂಪವಾದ ಚೈತನ್ಯಸ್ವರೂಪಕ್ಕೆ ಮುಸುಕು ಹಾಕಿರುತ್ತದೆ. ಈ ಮುಸುಕನ್ನು ನಿವಾರಿಸಿಕೊಳ್ಳುವುದೇ ಸಾಧನೆಯ ಉದ್ದೇಶ.

ವಿಷ್ಣುವೇ ಮಹೋತ್ತಮ ಭಗವಂತನಾಗಿದ್ದಾನೆ. ಅವನು ಎಲ್ಲ ಜೀವಿಗಳ ಹೃದಯಗಹ್ವರದಲ್ಲಿ ಅಂತರ್ಯಾಮಿ ರೂಪದಿಂದ ವಾಸಿಸುತ್ತಾನೆ. ಅವನೇ ಎಲ್ಲ ಜೀವಿಗಳ ಸ್ವರೂಪಕ್ಕೂ ಆಧಾರಭೂತನಾಗಿ ಇರುವಂಥವನು. ಹೇಗೆ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬಕ್ಕೆ, ಅದರ ಮುಂದೆ ನಿಂತಿರುವ ಮೂಲಸ್ವರೂಪವೇ ಬಿಂಬವೋ, ಹಾಗೆಯೇ ಜೀವಿಗೆ ಆಧಾರಭೂತನಾದ ಭಗವಂತನು 'ಬಿಂಬ' ಸ್ವರೂಪನು; ಜೀವಿಯು ಅವನ 'ಪ್ರತಿಬಿಂಬ' ಮಾತ್ರದವನು. ಪ್ರತಿಬಿಂಬವು ಯಾವತ್ತೂ ಬಿಂಬದ ಅಧೀನ. ಅದು ಎಲ್ಲ ಸಮಯದಲ್ಲಿಯೂ ಬಿಂಬದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಹಾಗೆಯೇ ಜೀವಿಗಳು ಎಲ್ಲ ಕಾಲಕ್ಕೂ ಭಗವಂತನಾದ ಹರಿಯ ಅಧೀನಕ್ಕೆ ಒಳಪಟ್ಟಿರುತ್ತಾರೆ; ಅವನ ನಿಯಂತ್ರಣಕ್ಕೆ ಒಳಪಟ್ಟಿರುತ್ತಾರೆ.

ಪುರಂದರ ಕನಕರ ಅನಂತರ ದಾಸಪರಂಪರೆಯ ಅತ್ಯಂತ ಪ್ರಮುಖ ಮಹನೀಯರಾದ ಶ್ರೀವಿಜಯದಾಸರು ತಮ್ಮ ಕೃತಿಗಳಲ್ಲಿ ಬಿಂಬ ಪ್ರತಿಬಿಂಬ ತತ್ತ್ವದ ಬಗ್ಗೆ ಕೂಲಂಕಷವಾಗಿ ವಿವರಣೆ ನೀಡಿದ್ದಾರೆ. ಅವರ ಪ್ರಕಾರ ಸೃಷ್ಟಿಯ ಪ್ರಾರಂಭದಲ್ಲಿ, ಶ್ರೀಹರಿಯೇ ಜೀವರಿಗೆ ಲಿಂಗದೇಹ ಸಂಬಂಧವನ್ನು ಕಲ್ಪಿಸುತ್ತಾನೆ;

ಅವರನ್ನು ಸಂಸಾರದಲ್ಲಿ ತೊಡಗಿಸುತ್ತಾನೆ. ಇದನ್ನು ಅವನು ಮಾಡುವುದು ತನ್ನ ದೈವೀಮಾಯೆಯಿಂದ. ಪ್ರಕೃತಿ ಕಾಲ ಅನಾದಿ ಕರ್ಮಗಳು ಜಡ. ಅವು ತಾವಾಗಿಯೇ ಯಾವ ಕಾರ್ಯವನ್ನೂ ಮಾಡಲಾರವು. ಶ್ರೀಹರಿ ಮಾತ್ರವೇ ಪರಚೈತನ್ಯ ಸ್ವರೂಪನಾಗಿದ್ದಾನೆ; ಸರ್ವಸ್ವತಂತ್ರನಾಗಿದ್ದಾನೆ ಹಾಗೂ ಸರ್ವರ ಸ್ವಾಮಿಯೂ ಆಗಿದ್ದಾನೆ. ಅವನೇ ದೇಹ ಆಕಾಶಗಳನ್ನು ವ್ಯಾಪಿಸಿಕೊಂಡು ಇರುತ್ತಾನೆ. ಅದರಂತೆಯೇ ಜೀವಿಗಳ ಒಳಗೆ ಕೂಡ ವ್ಯಾಪ್ತನಾಗಿ ಇರುತ್ತಾನೆ. ಲಿಂಗದೇಹವನ್ನು ತೊಯಿದ ಬಟ್ಟೆಯಂತೆ ಜೀವನ ಮೇಲೆ ಅಂಟಿಸುವವನು ಅವನೇ. ಆದರೆ ಲಿಂಗಶರೀರವೆಂಬುದು ಜೀವಿಯ ನೈಜಸ್ವರೂಪವಲ್ಲವೆಂಬುದನ್ನು ಮರೆಯಬಾರದು.

ಹೀಗೆ ಚೇತನಾಚೇತನಕ್ಕೆ ಮುಖ್ಯ ಕಾರಣನಾಗಿ ಇರುವ ಹರಿಯೇ 'ಬಿಂಬ'ರೂಪನು. ಕನ್ನಡಿಯಲ್ಲಿ ಬಿಂಬದ ಪ್ರತಿಬಿಂಬವು ಬೀಳುತ್ತದೆ. ಹಾಗೆಯೇ ಪರಮಾತ್ಮನ ಪ್ರತಿಬಿಂಬವು 'ಜೀವಿ' ಎಂಬ ಕನ್ನಡಿ ಅಥವಾ ಉಪಾಧಿಯ ಮೇಲೆ ಉಂಟಾಗುತ್ತದೆ. ಆದರೆ ಕತ್ತಲೆಯಲ್ಲಿ ಪ್ರತಿಬಿಂಬವು ಮೂಡುವುದಿಲ್ಲ. ಅದಕ್ಕೆ ಬೆಳಕು ಬೇಕು. ಅದರಂತೆಯೇ ಭಗವಂತನೆಂಬ ಬಿಂಬದ ಪ್ರತಿಬಿಂಬವು ಜೀವಿಯೆಂಬ ಉಪಾಧಿಯ ಮೇಲೆ ಬೀಳಲು 'ಮಾಯೆ' ಎಂಬ ಬೆಳಕು ಬೇಕು. ಇದನ್ನು ವಿಜಯದಾಸರು ತಮ್ಮ ಅಭಯಸುಳಾದಿ ಎಂಬ ಕೃತಿಯಲ್ಲಿ ಹೀಗೆ ವಿವರಿಸುತ್ತಾರೆ:

**ತರಣಿ ಉದ್ಭವವಾಗೆ ಆತನ ಪ್ರಕಾಶ ಮರದ ಮೇಲೆ ಬೀಳಲದರ ನೆರಳು ಕಪ್ಪು ತೆರನಾಗಿ ತೋರಲು, ಅಲ್ಲಿದ್ದ ದೋಷ ಭಾಸ್ಕರನಿಂದ ಬಂದದ್ದೇ (ಅಥವಾ) ಮರದ ತಪ್ಪೇ?** (ತರಣಿ = ಸೂರ್ಯ)

ಇಂಥ ಭಗವದಧೀನವಾದ ಮಾಯೆ ಅಥವಾ ಶಕ್ತಿಗೂ, ಭಗವಂತನಿಗೂ ಯಾವ ಭೇದವೂ ಇಲ್ಲವೆಂದೇ ವಿಜಯದಾಸರು ಮುಂದಿನ ಸಾಲುಗಳಲ್ಲಿ ಹೇಳುತ್ತಾರೆ. ಈ ಮಾತು ಶ್ರೀರಾಮಕೃಷ್ಣರ ಶಿವ-ಶಕ್ತಿ ಅಭೇದದ ಉಪದೇಶವನ್ನು ಹೋಲುತ್ತದೆ:

**ತರಣಿ ಪ್ರಕಾಶ ಮರದ ಮೇಲೆ ಬಿದ್ದಂತೆ ನಿರುತ ಎನ್ನ ಮೇಲೆ ಬಿದ್ದಿಹುದೋ, ಪರಿಪೂರ್ಣ ಮೂರುತಿ ವಿಜಯವಿಠ್ಠಲ ಕರುಣಾಶರಧಿ, ನಿನ್ನ ಮಾಯಕ್ಕು ನಿನಗೂ ಭೇದವಿಲ್ಲ.**

ಕನ್ನಡಿಯಲ್ಲಿ ಮೂಡುವ ಪ್ರತಿಬಿಂಬಕ್ಕೆ, ಬಿಂಬಕ್ಕೆ ಇರುವ ಶಕ್ತಿಯಾಗಲಿ, ಜ್ಞಾನವಾಗಲಿ ಉಂಟಾಗುವುದಕ್ಕೆ ಸಾಧ್ಯವಿಲ್ಲ ತಾನೇ? ಹಾಗೆಯೇ ಪ್ರತಿಬಿಂಬಸ್ವರೂಪನಾದ ಜೀವಿಗೂ ಭಗವಂತನ ಗುಣಗಳು ಇರಲು ಸಾಧ್ಯವಿಲ್ಲ. ಅವನು ಅಲ್ಪಜ್ಞ, ಅಶಕ್ತ ಮತ್ತು ದೋಷಗಳಿಂದ ಕೂಡಿರುತ್ತಾನೆ. ಆದರೆ ಬಿಂಬ ರೂಪನಾದ ಶ್ರೀಹರಿಯು ಗುಣಗಣಾಂಬುಧಿ; ನಿತ್ಯ ನಿರ್ದೋಷ ಪೂರ್ಣವಿಜ್ಞಾನ ನಿರಾಕಾರ ಸ್ವರೂಪವಾಗಿರುತ್ತಾನೆ. ಅದಲ್ಲದೆ, **ಪುಣ್ಯಪಾಪಗಳೆರಡು ಹರಿ ಮಾಡಿದಂತೆ ಜೀವಗಣ್ಣುರು ಮಾಳ್ಪರು** – ಎಲ್ಲ ಜೀವಿಗಳ ಎಲ್ಲ ಕ್ರಿಯೆಗಳ ಕಾರಕನೂ ಅವನೇ. ಈ ಕ್ರಿಯೆಯಿಂದ ಬಿಂಬನಾದ ಶ್ರೀಹರಿಗೆ ಯಾವ ಲೇಪವೂ ಇಲ್ಲ. ಪ್ರತಿಬಿಂಬನಾದ ಜೀವಿಗೆ ಮಾತ್ರವೇ ಕರ್ಮಲೇಪವು ತಟ್ಟುತ್ತದೆ.

ಹೀಗೆ ನಿತ್ಯಪ್ರತಿಬಿಂಬನಾದ ಜೀವಿಯು ಶ್ರೀಹರಿಯನ್ನು ತನ್ನ 'ಬಿಂಬರೂಪ' ನೆಂಬಂತೆ ಅನವರತವೂ ಮನನ ಮತ್ತು ಧ್ಯಾನ ಮಾಡುವುದೇ 'ಬಿಂಬೋಪಾಸನೆ' ಅನ್ನಿಸಿಕೊಳ್ಳುತ್ತದೆ. ಇದರಿಂದ ಜೀವಿಯ ಅಜ್ಞಾನದ ಆವರಣವು ಹರಿದು, ಅವನಿಗೆ ತನ್ನ ನಿಜ ಸ್ವರೂಪದ ಅರಿವು ಚೆನ್ನಾಗಿ ಆಗುತ್ತದೆ.

ಹರಿದಾಸರು ತಮ್ಮ ಪದ್ಯಗಳಲ್ಲಿ ಈ ಬಿಂಬೋಪಾಸನೆಗೆ ಅತ್ಯಂತ ಮಹತ್ವವನ್ನು ನೀಡುತ್ತಾರೆ. ಅವರ ಸಾಧನಾವಿಧಾನ ಹೀಗಿದೆ: ಗುರುವಿನ ಆಜ್ಞೆಯ ಪ್ರಕಾರ ಮೊದಲಿಗೆ ಅಭ್ಯಾಸಕ್ಕಾಗಿ ಭಗವಂತನ ಪ್ರತಿಮೆಯನ್ನು ತಂತ್ರಸಾರದಲ್ಲಿ ಹೇಳಿದ ಪ್ರಕಾರ ಅರ್ಚನೆ ಮಾಡಬೇಕು. ಪ್ರತಿಮೆಯಲ್ಲಿ ಪೂಜಿಸುವ ಹರಿಯನ್ನು ಚಿಂತಿಸುತ್ತಾ, ಸಾಧಕನ ಮನಸ್ಸಿನಲ್ಲಿ ಅದರ ಪ್ರತೀಕವು ಚೆನ್ನಾಗಿ ನಿಲ್ಲುತ್ತದೆ. ಸಾಧನೆಯ ಅಂಗಗಳಾಗಿ ಮಾಡುವ ಯಮ, ನಿಯಮ ಪ್ರಾಣಾಯಾಮ ಮುಂತಾದವುಗಳಿಂದ ಸಾಧಕನು ಹೆಚ್ಚು ಹೆಚ್ಚು ಅಂತರ್ಮುಖಿಯಾದ ಹಾಗೆ, ಈ ಪ್ರತೀಕ ಮನಸ್ಸಿನಲ್ಲಿ ಹೆಚ್ಚು ಹೆಚ್ಚು ನಿಚ್ಚಳವಾಗಿ ನಿಲ್ಲುತ್ತದೆ. ಇದು ಬಿಂಬ ಅಪರೋಕ್ಷ ಜ್ಞಾನಕ್ಕೆ ಮೆಟ್ಟಿಲಾಗಿದೆ. ಅನಂತರ ಸಾಧಕನು ತನ್ನ ಹೃದಯಮಂದಿರದಲ್ಲಿ ಹರಿಯ ಸೇವೆಗೆ ಅರ್ಪಿತವಾದ ಮಂಟಪ ಮೊದಲಾದವುಗಳನ್ನು ಧ್ಯಾನಿಸಬೇಕು. ಆತ್ಮನಾದ ನಾನು ಇಂಥ ಹರಿಗೆ ಚಿರ ಅಡಿಯಾಳು, ಆ ಮಂಟಪಗಳ ಸ್ಥಾನದಲ್ಲಿ ಇರುವವನು ಎಂದು ಭಾವಿಸಿಕೊಳ್ಳಬೇಕು. ಪ್ರತಿಬಿಂಬದಂತೆ ಅಸ್ವತಂತ್ರನಾದ ತನಗೆ ಆಧಾರವಾಗಿರುವ ಬಿಂಬಸ್ವರೂಪನು ಭಗವಂತನೇ ಆಗಿದ್ದಾನೆ ಎಂದುಕೊಂಡು, ಅವನ ಸ್ವರೂಪವನ್ನು ಗಾಢವಾಗಿ ಚಿಂತಿಸಬೇಕು.

ಮುಂದೆ ಆ ಸ್ವರೂಪದ ಮಹಿಮಾವಿಶೇಷವು ಮನಸ್ಸಿಗೆ ಚೆನ್ನಾಗಿ ಮುಟ್ಟುವಂತೆ ಚಿಂತಿಸಬೇಕು. ಭಗವಂತನ ಈ ಮೂರ್ತಿಯೇ ಇಡೀ ಬ್ರಹ್ಮಾಂಡದಲ್ಲಿ ಓತಪ್ರೋತವಾಗಿರುವ, ಸರ್ವತ್ರವ್ಯಾಪ್ತವಾದ ಹರಿಯಾಗಿದ್ದಾನೆ; ಇದು ಸಚ್ಚಿದಾನಂದ ಸ್ವರೂಪದ್ದಾಗಿದೆ; ಬೇರೆಲ್ಲ ಭಗವನ್ಮೂರ್ತಿಗಳೂ ಇದಕ್ಕಿಂತ ಅಭಿನ್ನವಾಗಿವೆ ಎಂದು ಗಾಢವಾಗಿ ಅನುಭಾವಿಸಿಕೊಳ್ಳಬೇಕು.

ಹೀಗೆ ಅಂತರಂಗದಲ್ಲಿ ಭಗವಂತನನ್ನು ಬಿಂಬಸ್ವರೂಪದಲ್ಲಿ ಕಾಣುವುದೇ **ಬಿಂಬಾಪರೋಕ್ಷದರ್ಶನ**. ಇದರ ಮಹತ್ವವನ್ನು ಕುರಿತು ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಬಹಳವಾಗಿ ಬಣ್ಣಿಸಿದ್ದಾರೆ: **ಕಣ್ಣಿನೊಳಗೆ ನೋಡೋ ಹರಿಯ, ಒಳಗಣ್ಣಿನೊಳಗೆ ನೋಡೋ ಮುಜ್ಜಗದೊಡೆಯನಾ** ಎಂಬ ಪುರಂದರದಾಸರ ಕೃತಿ ಬಿಂಬೋಪಾಸನೆಯ ವಿಧಾನವನ್ನು ತಿಳಿಸುತ್ತದೆ. ಹೃದಯ ಕಮಲದಲ್ಲಿ ಮಾಡಬೇಕಾದ ಮಾನಸಪೂಜೆಯನ್ನು ಕೂಡ ಹರಿದಾಸರ ರಚನೆಗಳು ಸಾಧಕನಿಗೆ ತಿಳಿಯಪಡಿಸುತ್ತವೆ. ಅವುಗಳಲ್ಲಿ ಶ್ರೀಗೋಪಾಲದಾಸರ ಕೃತಿಯೊಂದು ಪ್ರಸಿದ್ಧವಾಗಿದೆ:

**ಧ್ಯಾನವನು ಮಾಡು ಬಿಂಬಮೂರುತಿಯ**
**ಆನಂದದಿಂದಲಿ ಕುಳಿತು ಅಂತರಂಗದಲಿ**

**ಸದಾಚಾರವಾಗಿ ದ್ವಾದಶ ಗುರುಗಳಿಗೆರಗಿ**
**ಮುದದಿಂದ ಮೂಲಮಂತ್ರವನು ಜಪಿಸಿ**